# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.

## ಸಿ.ಸಿ. ಸಂಖ್ಯೆ 150/2023

## ದಿನಾಂಕ 19.05.2026

**ಫಿರ್ಯಾದಿದಾರರು:** ಸರ್ಕಾರದ ಪರ ಹುಣಸೂರು ಗ್ರಾಮಾಂತರ
ಪೊಲೀಸ್ ಠಾಣೆ, ಹುಣಸೂರು, ಮೈಸೂರು ಜಿಲ್ಲೆ.

– ವಿರುದ್ಧ –

ಆರೋಪಿ :

ಎ 1. ಜಯಮ್ಮ ಅಲಿಯಾಸ್ ನಿಂಗಮ್ಮ
ಕೋಂ ರಾಜೇಗೌಡ
52 ವರ್ಷ ವಯಸ್ಸು

ಎ 2. ರಾಜೇಗೌಡ ಬಿನ್ ವೈರಮುಡಿಗೌಡ
52 ವರ್ಷ ವಯಸ್ಸು

ಎ 3. ಚಲುವರಾಜು ಬಿನ್ ರಾಜೇಗೌಡ
40 ವರ್ಷ ವಯಸ್ಸು

ಎ 4. ಬೀರೇಶ ಬಿನ್ ರಾಜೇಗೌಡ
33 ವರ್ಷ ವಯಸ್ಸು

ಎಲ್ಲರ ವಾಸ: ದಾಸನಪುರ ಗ್ರಾಮ
ಹುಣಸೂರು ತಾಲ್ಲೂಕು
ಮೈಸೂರು ಜಿಲ್ಲೆ.

## ಆರೋಪಣೆ

**ಶ್ರೀಮತಿ. ಆಯಿಶಾಬಿ .ಪಿ. ಮಜೀದ್, ಬಿ.ಎ., ಎಲ್.ಎಲ್.ಬಿ.**, ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಮೇಲೆ ಹೇಳಿದ ಆರೋಪಿಗಳಾದ ನಿಮ್ಮನ್ನು ಈ ಕೆಳಕಂಡಂತೆ ಆಪಾಧಿಸುವುದೇನೆಂದರೆ,

1. ಮೊದಲನೇಯದಾಗಿ ದಿನಾಂಕ 29.10.2022 ರಂದು ಸಂಜೆ 05.30 ಗಂಟೆ ಸಮಯದಲ್ಲಿ, ಹುಣಸೂರು ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು ದಾಸನಪುರ ಗ್ರಾಮದ 1 ರಿಂದ 4 ನೇ ಆರೋಪಿಗಳಾದ ನೀವುಗಳು ಅಪರಾಧ ಎಸಗುವ ಸಮಾನ ಉದ್ದೇಶದಿಂದ, 2 ನೇ ಆರೋಪಿಯಾದ ನಿಮ್ಮ ಜಮೀನಿನ ತೆವರಿಯ ಮೇಲೆ ಸಾಕ್ಷಿ-1 ಸಣ್ಣೇಗೌಡ ರವರು ಸಾಕ್ಷಿ-2 ರಾಚಯ್ಯ ರವರ ಜೊತೆ ಬರುತ್ತಿದ್ದಾಗ 2 ನೇ ಆರೋಪಿಯಾದ ನೀವು ಸಾಕ್ಷಿ-1 ರವರನ್ನು ತಬ್ಬಿ ಹಿಡಿದುಕೊಂಡು ಅಡ್ಡಗಟ್ಟಿ ಅವರು ಮುಂದೆ ಚಲಿಸದಂತೆ ತಡೆದು ನಿಲ್ಲಿಸಿರುತ್ತೀರಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ ಕಲಂ 34 ರ ಪ್ರಕಾರ ದಂಡನೀಯ ಅಪರಾಧವನ್ನು ಎಸೆಗಿರುವಿರಿ?

2. ಕೊನೇಯದಾಗಿ ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 4 ನೇ ಆರೋಪಿತರಾದ ನೀವು ಅಪರಾಧ ಎಸಗುವ ಸಮಾನ ಉದ್ದೇಶದಿಂದ, 1 ನೇ ಆರೋಪಿಯಾದ ನೀವು ಸಾಕ್ಷಿ-1 ರವರ ಮೇಲೆ ಹಳೆಯ ದ್ವೇಷವನ್ನಿಟ್ಟುಕೊಂಡು ಏಕಾಏಕಿ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ನಿಂದಿಸುತ್ತ ನಮ್ಮ ಜಮೀನಿನ ಮೇಲೆ ಏಕೆ ಬರುತ್ತಿದ್ದೀಯಾ ಎಂದು ಗಲಾಟೆ ತೆಗೆದಾಗ ಅಲ್ಲಿಯೇ ಇದ್ದ 2 ರಿಂದ 4 ನೇ ಆರೋಪಿಗಳಾದ ನೀವುಗಳು ಸಾಕ್ಷಿ-1 ರವರ ಜೊತೆ ಗಲಾಟೆಗೆ ಬಂದು ಬಾಯಿಗೆ ಬಂದಂತೆ ಬೈದಿದ್ದು ನಂತರ ಪುನಃ ಸಾಕ್ಷಿ-1 ರವರು ಊರಿನೊಳಗೆ ದಾಸನಪುರ ಗ್ರಾಮದ ಲೋಕೇಶರವರ ವಾಸದ ಮನೆ ಮುಂಭಾಗ ಬರುತ್ತಿದ್ದಾಗ ಮೇಲ್ಕಂಡ 1 ರಿಂದ 4 ನೇ ಆರೋಪಿಗಳಾದ ನೀವುಗಳು ಜಗಳಕ್ಕೆ

ಬಂದು ಸಾಕ್ಷಿ–1 ರವರನ್ನು ಬಾಯಿಗೆ ಬಂದಂತೆ ಆವಾಚ್ಯ ಶಬ್ದಗಳಿಂದ ಬೈದು ಅವರನ್ನು ಅವಮಾನ ಮಾಡಿ, ಆ ಮೂಲಕ ಅವರಿಗೆ ಉದ್ರೇಕವನ್ನುಂಟು ಮಾಡಿದರೆ ಅಂತಹ ಉದ್ರೇಕದಿಂದ ಅವರು ಶಾಂತಿಭಂಗವನ್ನುಂಟು ಮಾಡಲೆಂಬ ಅಥವಾ ಇತರ ಯಾವುದೇ ಅಪರಾಧವನ್ನು ಮಾಡಲೆಂಬ ಉದ್ದೇಶದಿಂದ ಅಥವಾ ಹಾಗೇ ಆಗುವ ಸಂಭವವಿದೆಯೆಂದು ತಿಳಿದು ಉದ್ದೇಶಪೂರ್ವಕವಾಗಿ ಅವರನ್ನು ಅವಮಾನ ಪಡಿಸಿರುತ್ತೀರಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರ ಪ್ರಕಾರ ದಂಡನೀಯ ಅಪರಾಧವನ್ನು ಎಸೆಗಿರುವಿರಿ?

ಸದರಿ ಆರೋಪಣೆಗಳಿಗೆ ಆರೋಪಿತರಾದ ನೀವುಗಳು ಗುರಿಯಾತಕ್ಕದ್ದು ಎಂದು ನಾನು ಈ ಮೂಲಕ ನಿರ್ದೇಶಿಸಿರುತ್ತೇನೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು, ಹುಣಸೂರು.

1 ನೇ ಆರೋಪಿಯ ಸಹಿಃ

2 ನೇ ಆರೋಪಿಯ ಸಹಿಃ

3 ನೇ ಆರೋಪಿಯ ಸಹಿಃ

4 ನೇ ಆರೋಪಿಯ ಸಹಿಃ